246 ಶ್ರೀ ಖಾದರ್ ಯು.ಟಿ.(ಮಂಗಳೂರು)

ಮಾನ್ಯ ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಮೀನುಗಾರಿಕಾ ಕುಟುಂಬಗಳ ಸಂಖ್ಯೆ ಎಷ್ಟು; ಇವರುಗಳಲ್ಲಿ ವಸತಿರಹಿತ ಮತ್ತು ನಿವೇಶನರಹಿತ ಕುಟುಂಬಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರಗಳನ್ನು ನೀಡುವುದು)

ಮೀನುಗಾರಿಕೆ ಕುಟುಂಬಗಳಿಗೆ ಸಂಬಂಧಿಸಿದಂತೆ ಜನಗಣತಿಯನ್ನು ಮೀನುಗಾರಿಕೆ ಇಲಾಖೆಯಿಂದ ಕೈಗೊಂಡಿರುವುದಿಲ್ಲ. ಕಡಲ ಮೀನುಗಾರಿಕೆಗೆ ಸಂಬಂಧಿಸಿದಂತೆ ಕೇಂದ್ರೀಯ ಸಾಗರ ಸಂಶೋಧನಾ ಸಂಸ್ಥೆ (C.M.F.R.I) ಇವರು 2005 ರಲ್ಲಿ ಕಡಲ ಮೀನುಗಾರಿಕೆ ಜನಗಣತಿಯನ್ನು ಕೈಗೊಂಡಿದ್ದು ಅದರಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಮೀನುಗಾರಿಕಾ ಕುಟುಂಬಗಳ ಸಂಖ್ಯೆ, ವಸತಿ ರಹಿತ ಕುಟುಂಬಗಳ ಸಂಖ್ಯೆ ಇವುಗಳನ್ನು ಅಂದಾಜಿಸಿ ತಾಲ್ಲೂಕುವಾರು ವಿವರಗಳನ್ನು, ಈ ಕೆಳಗೆ ನೀಡಲಾಗಿದೆ. ಜಿಲ್ಲೆಯ ಒಳನಾಡು ತಾಲ್ಲೂಕುಗಳಾದ ಬಂಟ್ವಾಳ, ಬೆಳ್ತಂಗಡಿ, ಪುತ್ತೂರು ಹಾಗೂ ಸೂಳ್ಯ ತಾಲ್ಲೂಕುಗಳಲ್ಲಿ ಪೂರ್ಣಾವಧಿ ವೃತ್ತಿನಿರತ ಮೀನುಗಾರರು ಇರುವುದಿಲ್ಲ. ಆದರೆ, ಮೀನು ಮಾರಾಟ ಹಾಗೂ ನದಿ ಮೀನುಗಾರಿಕೆಯಲ್ಲಿ ತೊಡಗಿರುವ ಕುಟುಂಬಗಳಿದ್ದು ಅವರು ತಾಲ್ಲೂಕಿನಾದ್ಯಂತ ಅಲ್ಲಲ್ಲಿ ಹರಡಿಕೊಂಡು ವಾಸಿಸುತ್ತಿದ್ದಾರೆ. ತಾಲ್ಲೂಕುವಾರು ಕುಟುಂಬಗಳ ಮಾಹಿತಿ ಕೆಳಕಂಡಂತಿದೆ.

ಕ್ರ ಸಂ	ತಾಲ್ಲೂಕು	ಮೀನುಗಾರಿಕಾ ಕುಟುಂಬಗಳು	ವಸತಿ ರಹಿತ ಕುಟುಬಂಗಳು	ನಿವೇಶನ ರಹಿತ ಕುಟುಂಬಗಳು
1)	ಮಂಗಳೂರು	3883	106	90
2)	ಬಂಟ್ವಾಳ	52	25	18
3)	ಬೆಳ್ತಂಗಡಿ	48	26	10
4)	ಪುತ್ತೂರು	65	28	15
5)	ಸುಳ್ಯ	43	18	12
ಒಟ್ಟು		4041	203	145

ಆ) ಈ ಕುಟುಂಬಗಳಿಗೆ ಸರ್ಕಾರದ ವತಿಯಿಂದ ಮನೆಗಳನ್ನು ನಿರ್ಮಿಸಿಕೊಡಲು ಹಣವನ್ನು ಮೀಸಲಿರಿಸಲಾಗಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ.

ಹಣವನ್ನು ಮೀಸಲಿರಿಸಿಲ್ಲ. ಆದರೆ ಮತ್ಸ್ಯಾಶ್ರಯ ಯೋಜನೆಯಡಿ ದಕ್ಷಣ ಕನ್ನಡ ಜಿಲ್ಲೆಯಲ್ಲಿ 1992 ರಿಂದ ಈವರೆವಿಗೆ 691 ಮನೆಗಳನ್ನು ಹೆಂಚಿಕೆ ಮಾಡಲಾಗಿದೆ. ಅವುಗಳಲ್ಲಿ 326 ಮನೆಗಳಿಗೆ ತಲಾ ರೂ. 30,000–00ದಂತೆ ಹಾಗೂ 356 ಮನೆಗಳಿಗೆ ತಲಾ ರೂ.40,000–00 ಹಣ ಮಂಜೂರಾಗಿದ್ದು 2006–07ನೇ ಸಾಲಿನವರೆಗಿನ ಒಟ್ಟು 516 ಮನೆಗಳಿಗೆ ಒಟ್ಟು ರೂ.173.80 ಲಕ್ಷ ಹಣವನ್ನು ವಿತರಿಸಲಾಗಿದೆ. 2007–08ನೇ ಸಾಲಿನಲ್ಲಿ 175 ಮನೆಗಳಿಗೆ ಪ್ರಥಮ ಕಂತು ರೂ.17.50 ಲಕ್ಷ ಹಣ ಬಿಡುಗಡೆ ಮಾಡಲಾಗಿದ್ದು, ಉಳಿದ ಹಣ ಬಿಡುಗಡೆಗೆ ಕ್ರಮ ಕೈಗೊಳ್ಳಲಾಗುತ್ತಿದೆ.

248 ಶ್ರೀ ಖಾದರ್ ಯು.ಟಿ.

ಲೋಕೋಪಯೋಗಿ ಸಚಿವರು

ಅ) ಲೋಕೋಪಯೋಗಿ ಇಲಾಖೆಯ ಮುಖ್ಯ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಶಾಸಕರಿಂದಪ್ರಸ್ತಾವನೆಗಳನ್ನು ಪಡೆದಿದ್ದು, ಇದುವರೆವಿಗೂ ಬಿಡುಗಡೆ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಸ್ಥಳೀಯ ಅಗತ್ಯತೆಗಳನ್ನು ಗಮನದಲ್ಲಿಟ್ಟು ಕೊಂಡು ಕ್ಷೇತ್ರದ ಶಾಸಕರು ಹಾಗೂ ಸಂಬಂಧ ಪಟ್ಟ ಕಾರ್ಯಪಾಲಕ ಇಂಜಿನಿಯರ್ ಸಲ್ಲಿಸುವ ಪ್ರಸ್ತಾವನೆಗಳನ್ನು ಪರಿಗಣಿಸಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.

ಆ) ಬಂದಿದ್ದಲ್ಲಿ, ಲೋಕೋಪಯೋಗಿ ಇಲಾಖೆ ರಸ್ತೆಗಳನ್ನು ಅಭಿವೃದ್ಧಿಪಡಿಸಲು ನಿಗದಿತ ಸಮಯದಲ್ಲಿ ಹಣವನ್ನು ಬಿಡುಗಡೆಗೊಳಿಸಿ ಮುಖ್ಯ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುವುದೇ?

ಆಯವ್ಯಯದಲ್ಲಿ ವಿವಿಧ ಲೆಕ್ಕಶೀರ್ಷಿಕೆಗಳ ಅಡಿಯಲ್ಲಿ ರಸ್ತೆಗಳ ಅಭಿವೃದ್ಧಿಗೆ ಒದಗಿಸಲಾಗಿರುವ ಅನುದಾನವನ್ನು ನಿಗದಿತ ಸಮಯದಲ್ಲಿ ಸಮರ್ಪಕವಾಗಿ ಬಳಸಲು ಕ್ರಮ ಜರುಗಿಸಲಾಗುತ್ತಿದೆ.